ಸಾಕ್ಷಿಯನ್ನು ದಿನಾಂಕ 13-06-2023 ರಂದು ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಪಿ ಎಂ ಹೆಚ್ ವಕೀಲರಿಂದಃ</u>**

ನನ್ನ ಅಜ್ಜನ ಹೆಸರು ಬಸವಣ್ಣೆಪ್ಪ ಹನಮಂತಪ್ಪ ಗೌರಕ್ಕನವರ. ಅವರ ತಂದೆ ತಾಯಿಗೆ ಅವರು ಒಬ್ಬರೇ ಮಗ. ನನ್ನ ಅಜ್ಜನಿಗೆ 7 ಮಂದಿ ಮಕ್ಕಳು. ಅವರೆಂದರೆ ಯಲ್ಲವ್ವ, ಮಹಾದೇವಿ, ಯಲ್ಲಪ್ಪ, ಮಲ್ಲೇಶಪ್ಪ, ಗುರುಸಿದ್ದಪ್ಪ , ಬಸವ್ವ ಮತ್ತು ರಮೇಶ. ನನ್ನ ಅಜ್ಜಿ ಹೆಸರು ಚೆನ್ನಮ್ಮ. ದಾವಾ ಆಸ್ತಿಯ ನಂಬರ 79/1 ರಲ್ಲಿ 7 ಎಕರೆ, 122/2 ರಲ್ಲಿ 5 ಎಕರೆ, 128/4 ಕ್ಷೇತ್ರ ನೆನಪಿಲ್ಲ, 139/1 ರಲ್ಲಿ 7 ಎಕರೆ 18 ಗುಂಟೆ, 126/2 ರಲ್ಲಿ 2 ಎಕರೆ 18 ಗುಂಟೆ, 128(ಸಬ್ ನಂಬರ ನೆನಪಿಲ್ಲ) ರಲ್ಲಿ 2 ಎಕರೆ ಹಾಗೂ ಸ್ವಲ್ಪ ಹೆಚ್ಚು ಇದೆ.

ದಾವಾ ಐಟಂ ನಂ.3 ಅಂದರೆ ಸರ್ವೆ ನಂ.126/2 ವಾದಿ ಅಥವಾ ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಅದು ನಮ್ಮ ಮನೆತನಕ್ಕೆ ಸೇರಿದ ಆಸ್ತಿ ಎಂದು ತೋರಿಸಲು ದಾಖಲೆ ಹಾಜರಪಡಿಸಿದ್ದೇನೆ. ಏನು ದಾಖಲಗೆಳು ಹಾಜರಪಡಿಸಿರುವುದು ಎಂದರೆ ಉತಾರುಗಳನ್ನು ಹಾಜರಪಡಿಸಿದ್ದೇನೆ ಎಂದು ನುಡಿಯುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಸರ್ವೆ ನಂ.139/1+2 ಎ ಸ್ವತ್ತನ್ನು ನನ್ನ ಅಜ್ಜ ಖರೀದಿ ಹಿಡಿದಿದ್ದರು. ಅಂದೇ ರೀತಿ ಸರ್ವೆ ನಂ.126/4 ನ್ನು ಕೂಡ ನನ್ನ ಅಜ್ಜ ಖರೀದಿ ಹಿಡಿದಿದ್ದರು. ಸರ್ವೆ ನಂ.79 ನ್ನು ಕೂಡ ನನ್ನ ಅಜ್ಜ ಖರೀದಿ ಹಿಡಿದಿದ್ದರು. ಸರ್ವೆ ನಂ.122/1 ಇದು ಪಿತ್ರಾರ್ಜಿತ ಆಸ್ತಿ ಅಂದರೆ ನನ್ನ ಅಜ್ಜನಿಗೆ ಅವರ ತಂದೆಯಿಂದ ಬಂದ ಆಸ್ತಿ ಇರಬಹುದು. ಆ ರೀತಿ ತೋರಿಸಲು ದಾಖಲೆ ಹಾಜರಪಡಿಸಿದ್ದೇನೆ. ಆ ರೀತಿ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ದಾವೆಯ ಎಲ್ಲಾ ಸ್ವತ್ತುಗಳು ನನ್ನ ಅಜ್ಜ ಖರೀದಿ ಹಿಡಿದ ಸ್ವತ್ತುಗಳಾಗಿವೆ ಎಂದರೆ ನಿಜ.

ಮನೆ ಸ್ವತ್ತಿನ ವಿಪಿಸಿ ನಂಬರ ಹೇಳಲು ನೆನಪಿಲ್ಲ. ಅವುಗಳನ್ನು ನನ್ನ ಅಜ್ಜ ಬಸವಣ್ಣೆಪ್ಪ ಖರೀದಿ ಹಿಡಿದಿದ್ದರು. ಪೂರ್ವಜರ ಆಸ್ತಿಯಿಂದ ಬಸವಣ್ಣೆಪ್ಪ ದಾವಾ ಸ್ವತ್ತನ್ನು ಸಂಪಾದಿಸಿದ್ದು ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಬಸವಣ್ಣೆಪ್ಪರವರಿಗೆ ಪೂರ್ವಜರ ಆಸ್ತಿ ಯಾವುದೂ ಇರಲಿಲ್ಲ ಹಾಗೂ ಎಲ್ಲವನ್ನು ಸ್ವಂತ ಖರೀದಿ ಮಾಡಿದ್ದು ಎಂದರೆ ಸರಿಯಲ್ಲ. ನನ್ನ ಅಜ್ಜ ಸರ್ವೆ ನಂ.79 ರಲ್ಲಿ 5 ಎಕರೆ 24

ಗುಂಟೆಯನ್ನು ಅಂದರೆ ದಾವಾ ಐಟಂ ನಂ.4 ನ್ನು ಪ್ರತಿವಾದಿ ಗುರುಸಿದ್ದಪ್ಪನಿಗೆ ಭಕ್ಷಿಶ್ ಮಾಡಿದ್ದಾರೆ ಎಂದರೆ ನಿಜ. ಆ ಪತ್ರ ಸೂಕ್ತ ನೊಂದಣಿಯಾಗಿದೆ ಎಂದರೆ ನಿಜ. ಅದೇ ರೀತಿ 5 ಮತ್ತು 6 ನೇ ಪ್ರತಿವಾದಿಯರಾದ ರಮೇಶ ಹಾಗೂ ಬಸವ್ವ ರವರಿಗೆ ನನ್ನ ಅಜ್ಜ ಸರ್ವೆ ನಂ.122/1 ರಲ್ಲಿ 7 ಎಕರೆ 18 ಗುಂಟೆಯನ್ನು ಭಕ್ಷಿಶ್ ಮಾಡಿದ್ದಾರೆ ಎಂದರೆ ನಿಜ. ಆ ಪತ್ರವೂ ಕೂಡ ಸೂಕ್ತ ನೊಂದಣಿಯಾಗಿದೆ ಎಂದರೆ ನೊಂದಣಿಯಾಗುವ ಸಮಯದಲ್ಲಿ ನನ್ನ ಅಜ್ಜನಿಗೆ ಆರೋಗ್ಯ ಚೆನ್ನಾಗಿರಲಿಲ್ಲ ಎಂದು ನುಡಿಯುತ್ತೇನೆ. ನನ್ನ ಅಜ್ಜನಿಗೆ ಆವಾಗ ಪಾರ್ಶ್ವವಾಯು ಖಾಯಿಲೆ ಇತ್ತು. ಆ ರೀತಿ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. 13/11/2021 ರಂದು ಒಂದು ಮೃತ್ಯುಪತ್ರವನ್ನು ನನ್ನ ಅಜ್ಜ ದಾವಾ ಆಸ್ತಿಗಳ ಪೈಕಿ 139/1 ರಲ್ಲಿ 5 ಎಕರೆ 7 ಗುಂಟೆಯನ್ನು 3 ನೇ ಪ್ರತಿವಾದಿ ಮಲ್ಲಪ್ಪರವರಿಗೆ ಹಾಗೂ 2 ಎಕರೆಯನ್ನು 1 ನೇ ಪ್ರತಿವಾದಿ ಯಲ್ಲವ್ವಳಿಗೆ ಬರೆದಿಟ್ಟಿದ್ದಾರೆ ಎಂದರೆ ಹೌದು ಬರೆದಿಟ್ಟಿದ್ದಾರೆ ಎಂದು ನುಡಿಯುತ್ತೇನೆ. ಆ ಎಲ್ಲ ವಿಷಯಗಳು ಗೊತ್ತಿದ್ದರೂ ಕೂಡ ಪ್ರತಿವಾದಿಯರಿಗೆ ತ್ರಾಸ್ ಕೊಡುವ ಸಲುವಾಗಿ ಸುಳ್ಳು ಕೇಸ್ ಹಾಕಿರುವುದು ಎಂದರೆ ಸರಿಯಲ್ಲ.

ನನ್ನ ತಾಯಿಯನ್ನು ನನ್ನ ತಂದೆ ಮದುವೆಯಾದ ನಂತರ ನನ್ನ ತಂದೆಯು ನನ್ನ ತಾಯಿಯ ತವರು ಮನೆಯಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆ ದುಶ್ಚಟಗಳ ದಾಸರಾಗಿದ್ದರು ಹಾಗೂ ಆದ್ದರಿಂದ ವಾದಿಯರು ತಂದೆ ಜೊತೆ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾವು ಬೆಳಗಲಿಯಲ್ಲಿ ವಾಸವಿರುತ್ತಿದ್ದೇವು ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ.

**ಮುಂದುವರೆದ ಪಾಟಿ ಸವಾಲಿಗೆ** ಕಾಲಾವಕಾಶ **ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.